## ಸೂಕ್ತಿಪ್ರಭ

ಸತ್ಕಾರ್ಯವನ್ನು ಮಾಡುವವರೇ ಪ್ರಾರ್ಥನೆಯಲ್ಲಿ ತೊಡಗಿರುವವರು, ಪ್ರಾರ್ಥನೆ ಮಾಡುವಂತೆ ಕಾಣುತ್ತಿರುವವರಲ್ಲ.–ಹಕಿಮ್ ಸನಾಯ್

* *

ಯತ್ ಕರ್ಮ ಕುರ್ವತೋಽಸ್ಯ ಸ್ಯಾತ್
ಪರಿತೋಷೋಽಂತರಾತ್ಮನಃ ।
ತತ್ ಪ್ರಯತ್ನೇನ ಕುರ್ವೀತ ವಿಪರೀತಂ ತು
ವರ್ಜಯೇತ್ ॥

ಯಾವ ಕರ್ಮವನ್ನು ಮಾಡಿದರೆ ಅಂತರಂಗಕ್ಕೆ ಸಂತೃಪ್ತಿ ಉಂಟಾಗುವುದೊ ಅಂತಹ ಕರ್ಮವನ್ನೇ ಮಾಡಬೇಕು. ಅದಕ್ಕೆ ವಿರುದ್ಧವಾದುದನ್ನು ತ್ಯಜಿಸಬೇಕು. –ಮನು

* *

ಇತರರ ಮೇಲೆ ಜಯ ಸಾಧಿಸುವವನು ಶಕ್ತಿಶಾಲಿ. ಆದರೆ ತನ್ನನ್ನೇ ಗೆದ್ದವನು ಸರ್ವಶಕ್ತ. –ಲಾಓ ಟ್ಸು

* *

ಇತರರಿಗೂ ಹಂಚದೆ ತಾನೂ ಅನುಭವಿಸದೆ ಇರುವ ಸಂಪತ್ತೂ ಸಂಪತ್ತೇ? ಶತ್ರುಗಳನ್ನು ನಿಗ್ರಹಿಸದ ಶಕ್ತಿ ಶಕ್ತಿಯೇ? ಧರ್ಮದಿಂದ ಕೂಡಿರದ ಜ್ಞಾನ ಜ್ಞಾನವೇ? ಶಿಸ್ತಿನಿಂದ ಕೂಡಿರದ ಜೀವನ ಜೀವನವೇ? — ಹಿತೋಪದೇಶ

* *

ಕೆಲಸವಿಲ್ಲದ ಸಂಪತ್ತು, ಅಂತಃಸಾಕ್ಷಿ ವಿಹೀನ ಇಂದ್ರಿಯಸುಖ, ಚಾರಿತ್ರ್ಯವಿಲ್ಲದ ಜ್ಞಾನ, ನೀತಿರಹಿತ ವ್ಯಾಪಾರ, ಮಾನವೀಯತೆಯನ್ನು ಬಿಟ್ಟ ವಿಜ್ಞಾನ, ತ್ಯಾಗವಿಲ್ಲದ ಧರ್ಮ ಮತ್ತು ತತ್ತ್ವರಹಿತ ರಾಜಕೀಯ—ಇವು ಏಳು ಮರಣಾಂತಿಕ ವಿಷಗಳು. –ಮಹಾತ್ಮಾ ಗಾಂಧಿ

* *

ಭೂಮಿಗೆ ಸೂರ್ಯನು ಹೇಗೊ ಹಾಗೆಯೇ ನೈತಿಕ ಸ್ವಭಾವಕ್ಕೆ ಪ್ರೀತಿ. –ಅನಾಮಿಕ

* *

ಶಿಕ್ಷಣದ ರಹಸ್ಯ ವಿದ್ಯಾರ್ಥಿಯನ್ನು ಗೌರವಿಸುವುದರಲ್ಲಿದೆ. —ಎಮರ್ಸನ್

* *

ಹೃದಯಕ್ಕೆ ಅದರದೇ ವಿಚಾರವಿದೆ, ಅದನ್ನು ವಿಚಾರ ಅರ್ಥಮಾಡಿಕೊಳ್ಳಲಾರದು. –ಪ್ಯಾಸ್ಕಲ್

# ಪ್ರಾರ್ಥನೆ

*ಶ್ರೀಶಂಕರಾಚಾರ್ಯ ವಿರಚಿತ ಶ್ರೀರಾಮಭುಜಂಗಪ್ರಯಾತಸ್ತೋತ್ರಮ್*

ವಿಶುದ್ಧಂ ಪರಂ ಸಚ್ಚಿದಾನಂದರೂಪಂ
ಗುಣಾಧಾರಮಾಧಾರಹೀನಂ ವರೇಣ್ಯಮ್ ।
ಮಹಾಂತಂ ವಿಭಾಂತಂ ಗುಹಾಂತಂ ಗುಣಾಂತಂ
ಸುಖಾಂತಂ ಸ್ವಯಂ ಧಾಮ ರಾಮಂ ಪ್ರಪದ್ಯೇ ॥

ಪರಿಶುದ್ಧನೂ ಉತ್ತಮನೂ ಸಚ್ಚಿದಾನಂದಸ್ವರೂಪನೂ ತ್ರಿಗುಣಗಳಿಗೆ ಆಧಾರನೂ ಸ್ವತಃ ಆಧಾರವಿಲ್ಲದವನೂ ಶ್ರೇಷ್ಠನೂ ಮಹಾಪುರುಷನೂ ಜ್ಯೋತಿಸ್ಸ್ವರೂಪನೂ ಹೃದಯಗುಹೆಯಲ್ಲಿ ಇರುವವನೂ ಸದ್ಗುಣಗಳಿಗೆ ಮತ್ತು ಸುಖಾನುಭವಕ್ಕೆ ಎಲ್ಲೆಯಾಗಿರುವವನೂ ತಾನೇ ಪರಂಧಾಮನೂ ಆಗಿರುವ ಶ್ರೀರಾಮನನ್ನು ಶರಣು ಹೊಂದುತ್ತೇನೆ.

ನಿಜೇ ಮಾನಸೇ ಮಂದಿರೇ ಸನ್ನಿಧೇಹಿ
ಪ್ರಸೀದ ಪ್ರಸೀದ ಪ್ರಭೋ ರಾಮಚಂದ್ರ ।
ಸಸೌಮಿತ್ರಿಣಾ ಕೈಕಯೀನಂದನೇನ
ಸ್ವಶಕ್ತ್ಯಾನುಭಕ್ತ್ಯಾ ಚ ಸಂಸೇವ್ಯಮಾನ ॥

ಸೀತೆ-ಭರತ-ಲಕ್ಷ್ಮಣರಿಂದಲೂ ಭಕ್ತರಿಂದಲೂ ಸೇವಿಸಲ್ಪಡುತ್ತಿರುವ ಪ್ರಭು ರಾಮಚಂದ್ರ! ಪ್ರಸನ್ನನಾಗು! ನನ್ನ ಮನೋಮಂದಿರದಲ್ಲಿ ನೆಲಸು!

ನಮಸ್ಸಚ್ಚಿದಾನಂದರೂಪಾಯ ತಸ್ಮೈ
ನಮೋ ದೇವದೇವಾಯ ರಾಮಾಯ ತುಭ್ಯಮ್।
ನಮೋ ಜಾನಕೀಜೀವಿತೇಶಾಯ ತುಭ್ಯಂ
ನಮಃ ಪುಂಡರೀಕಾಯತಾಕ್ಷಾಯ ತುಭ್ಯಮ್ ॥

ಸಚ್ಚಿದಾನಂದರೂಪನಾದ ಅವನಿಗೆ ನಮಸ್ಕಾರ! ದೇವದೇವನೂ ಶ್ರೀರಾಮನೂ ಆದ ನಿನಗೆ ನಮಸ್ಕಾರ! ಜಾನಕೀಜೀವನಕ್ಕೆ ಒಡೆಯನಾದ ನಿನಗೆ ನಮಸ್ಕಾರ! ಕಮಲದಂತೆ ಕಣ್ಣುಳ್ಳ ನಿನಗೆ ನಮಸ್ಕಾರ!

ನಮೋ ಭಕ್ತಿಯುಕ್ತಾನುರಕ್ತಾಯ ತುಭ್ಯಂ
ನಮಃ ಪುಣ್ಯಪುಂಜೈಕಲಭ್ಯಾಯ ತುಭ್ಯಮ್।
ನಮೋ ವೇದವೇದ್ಯಾಯ ಚಾದ್ಯಾಯ ಪುಂಸೇ
ನಮಃ ಸುಂದರಾಯೇಂದಿರಾವಲ್ಲಭಾಯ ॥

ಭಕ್ತರಲ್ಲಿ ಅನುರಕ್ತನಾದ ನಿನಗೆ ನಮಸ್ಕಾರ! ಕೇವಲ ಪುಣ್ಯಬಲದಿಂದ ದೊರಕುವ ನಿನಗೆ ನಮಸ್ಕಾರ! ವೇದದಿಂದ ತಿಳಿದು ಬರುವ ಆದಿ ಪುರುಷನಾದ ನಿನಗೆ ನಮಸ್ಕಾರ! ಸುಂದರನೂ ಇಂದಿರಾವಲ್ಲಭನೂ ಆದ (ನಿನಗೆ) ನಮಸ್ಕಾರ!